Doc-23
T-P-2

(1)

R No KRNN 12

27 - 3 - 74



ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥ ಚಾರಿವಿರಕ ಎಂ. ಎಸ್. ಕೃಷ್ಣರಾವ್ ಶ್ರೀ ಕ್ಷ

ಕರ್ನಾಟಕಕ್ಕೆ ಅಧಿಕ ಗೋಧಿ ಬರುವ ನಿರೀಕ್ಷೆ

ಲೈಂಗಿಕ ಶಿಕ್ಷಣ

ಕಲ್ಕತ್ತಾ— ಪಶ್ಚಿಮ ಬಂಗಾಳ ಸರಕಾರವು ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನು ಜಾರಿಗೆ ತರುವುದಿಲ್ಲವೆಂದೂ, ಅಂತಹ ಯೋಚನೆಯು ಸರಕಾರಕ್ಕಿಲ್ಲವೆಂದೂ ವಿಧಾನಸಭೆಯಲ್ಲಿ ತಿಳಿಸಲಾಯಿತು

ನೀರು ಕಡಮೆಯಾಗಲು ಒಪ್ಪಲ್ಲ

ಮದ್ರಾಸು— ಕರ್ನಾಟಕ ಮತ್ತು ಕೇರಳದ ಒಪ್ಪಂದದಲ್ಲಿ, ತಮಿಳು ನಾಡುವಿಗೆ ಇರುವ ಈಗಿನ ಕಾವೇರಿನೀರಿನಲ್ಲಿ ಕಡಮೆಗೆ ರಾಜ್ಯ ಒಪ್ಪುವುದಿಲ್ಲವೆಂದು ವಿಧಾನಸಭೆಯಲ್ಲಿ ತಿಳಿಸಲಾಯಿತು.

ಮೈಸೂರು ಪೌರರಲ್ಲಿ ಕಮಿಷನರ್‌ರವರ ವಿನಂತಿ

ಮೈಸೂರು— ಬಿಸಲು ಕಾಲದಲ್ಲಿ ಕಾಲರಾ ಹರಡುವ ಸೂಚನೆಗಳಿರುವುದೆಂದೂ, ಮಹಾಜನರು ಆಹಾರ ಮತ್ತು ಕುಡಿಯುವ ನೀರಿನ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕೆಂದೂ, ಪ್ರತಿಬಂಧಕವಾಗಿ ಇನಾಕ್ಯುಲೇಷನ್ ಹಾಕಿಸಿಕೊಳ್ಳಬೇಕೆಂದೂ ಮುನಿಸಿಪಲ್ ಕಮಿಷನರ್‌ರವರು ವಿನಂತಿಸಿಕ್ಕಾರೆ.

ಶಾಸನಸಭೆಯ ಧಿಕ್ಕಾರಕ್ಕಾಗಿ

ತಿರುವೆಂಡ್ರಂ— ಶಾಸನ ಸಭೆಯ ಪ್ರೇಕ್ಷಕರ ಗ್ಯಾಲರಿ ಪ್ರವೇಶಿಸಿದ್ದ ಇಬ್ಬರು ಯುವಕರು ಘೋಷಣೆ ಕೂಗುತ್ತಾ, ಹಸ್ತಪತ್ರಿಕೆಗಳನ್ನು ಎಸೆದರು – ಸಭೆಯ ಧಿಕ್ಕಾರಕ್ಕಾಗಿ ಅವರಿಗೆ ಮಾರ್ಚ್ 31 ರವರೆಗೆ ಸಾದಾ ಸಜೆ ವಿಧಿಸಲಾಯಿತು.

ಆನೆಗಳ ಹಾವಳಿ

ತ್ರಿಚೂರು— ಪರಪುಕ್ಕವುವಿನಲ್ಲಿಯ ದೇವಾಲಯ ಉತ್ಸವದಲ್ಲಿ ಆನೆಗಳ ಹಾವಳಿಯಿಂದ 60 ಕ್ಕೂ ಹೆಚ್ಚು ಮಂದಿ ಗಾಯಗೊಂಡರು.

★

ಹಾಲು

ರಾಷ್ಟ್ರೀಯ ಡೆಯಿರಿ (ಕ್ಷೀರ ಕೇಂದ) ಅನುಸಂಧಾನಶಾಲೆಯು – ಕರನಾಲಿನಲ್ಲಿರುವ – ವಿಕೇಷಜ್ಞ ಶ್ರೀ ಸಿ ಎ ಥಾಮಸ್‌ರವರ ಮತಾನುಸಾರ ಶರೀರವನ್ನು ಸ್ವಸ್ಥವಾಗಿಡಲು ಪ್ರೋಟೀನ್, ಕ್ಯಾಲ್ಸಿಯಂ ಮತ್ತು ವಿಟಮಿನ್ ಅನಶ್ಯಕ; ಹಾಲಿನಲ್ಲಿ ಇವು ನೂರು ಇರುತ್ತವೆ; ಆದುದರಿಂದಲೇ ಹಾಲಿಗೆ ಪೂರ್ಣ ಭೋಜನವೆಂದು ಕರೆಯುತ್ತಾರೆ.

ಇಂಗ್ಲೆಂಗ್ ನ್ಯಾಷನಲ್ ಇನ್‌ಸ್ಟ್ಯೂಟಿನ ಡೆಯಿರಿ ರಿಸರ್ಚ್ ಡೈರೆಕ್ಟರರಾದ ಡಾ॥ ಹೆಚ್ ಕೆ ಯಟರ ಪಕ್ಷಪಾತಿಯು– ರಷ್ಯದ ಜನಸ್ವಾಸ್ಥ್ಯ ಸುಧಾರಿಸಬೇಕಾದರೆ ದುಗ್ಧವಿನ ಹಾಗೂ ಕ್ಷೀರಕೃತ ಪದಾರ್ಥಗಳನ್ನು ಅಧಿಕಾಧಿಕವಾಗಿ ವ್ಯವಹಾರದಲ್ಲಿ ಬರುವಂತೆ ಪರ್ಯಾಪ್ತ ಪ್ರಚಾರ ಮಾಡಬೇಕು– ಎಂದಿರುತ್ತದೆ.

ಇಂಗ್ಲೆಂಡಿನ ಇಪ್ಪತ್ತು ಡಾಕ್ಟರು ಹೆಚ್ ಸಿ ಕೇರಿಮನ್– ಮಕ್ಕಳಿಗೆ ಸಾಕಷ್ಟು ಹಾಲು ಕೊಟ್ಟರೆ ಅವರು ತೂಕ ಮತ್ತು ಎತ್ತರ ಪರ್ಯಾಪ್ತ ರೀತಿಯಲ್ಲಿ ವೃದ್ಧಿಯಾಗಿ ಪೂರ್ಣ ವಿಕಾಸದಲ್ಲಿ ಶಾರೀರಿಕ ಸುಧಾರಣೆಯು ಆಗುತ್ತದೆ, ಎಂದು ಬರೆದಿರುತ್ತಾರೆ.

ಗೋಮಾಂಸ ರಫ್ತೆ !

ನವದೆಹಲಿ— ಸರಕಾರವು ವಿದೇಶೀ ವಿನಿಮಯ ಗಳಿಸಲು ಕುಮೇಟ್ ಮತ್ತಿತರ ಪರ್ಯಾಯಾಕೊಲ್ಲಿ ರಾಜ್ಯಗಳಿಗೆ ಗೋಮಾಂಸ ರಫ್ತು ಮಾಡುವ ವಿಷಯ ಬಗ್ಗೆ ರಾಜ್ಯಸಭೆಯಲ್ಲಿ ಜನಸಂಘದ ಸದಸ್ಯ ಶ್ರೀ ಓ.ಹಿ. ತ್ಯಾಗಿಯವರು ಕಳವಳ ವ್ಯಕ್ತಪಡಿಸಿದರು – ಈ ಬಗ್ಗೆ ಎಲ್ಲಾ ವಿವರಗಳನ್ನೂ ಸರಕಾರ ತಿಳಿಸಬೇಕೆಂದೂ, 1967 ರದಂತೆ ಗೋರಕ್ಷಣೆಯ ಚಳವಳಿಯು ಮತ್ತೆ ಆಗಬಹುದೆಂದೂ, ಪಶು ಮಾಂಸ ರಫ್ತಿನಿಂದ ವಿದೇಶಿ ಗಳ ವಧೆಯಿಂದ ಆರ್ಥಿಕ ಸ್ಥಿತಿಕೆಡುವುದೆಂದೂ ಹೇಳಿದರು.

★

ಮುಸ್ಲಿಂ ವಿದ್ಯಾರ್ಥಿಗಳಿಗೆ

ಬೆಂಗಳೂರು— ಮುಸ್ಲಿಂ ವಿದ್ಯಾರ್ಥಿಗಳಿಗೆ ರೂ. 10 ಲಕ್ಷದ ವಿದ್ಯಾರ್ಥಿ ವೇತನ ನಿಧಿಯನ್ನು ಸ್ಥಾಪಿಸಲೂ, ಉದ್ಯೋಗ ಮತ್ತು ವಾರ್ತಾ ಕೇಂದ್ರ ಸ್ಥಾಪಿಸಲೂ ಅಖಿಲ ಭಾರತ ಮುಸ್ಲಿಂ ಸಂಘದ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ

●

ಆಮದು ತಗ್ಗಿಸಲಾಗಿದೆ

ನವದೆಹಲಿ— ಈ ವರ್ಷ ಸೆಟ್ರೋಲು ಪದಾರ್ಥಗಳು ಮತ್ತು ಕಚ್ಚಾ ಎಣ್ಣೆಯ ಆಮದಿನ ಪರಿಮಿತಿಯನ್ನು ಸರಕಾರ ರೂ 950 ಕೋಟಿ ನಿಗದಿಪಡಿಸಿದೆ

ಛತ್ರಿ
ರೇನ್ ಕೋಟುಗಳಿಗೆ
ಬ್ಯಾಂಕ್ ರೋಡ್ ಬಾಹುಸಾಕ್
A Firm known for
Genuine Good Business

ಹೆಚ್ಚು ಗೋಧಿ

ಬೆಂಗಳೂರು— ಕರ್ನಾಟಕ ರಾಜ್ಯಕ್ಕೆ ಏಪ್ರಿಲ್ ತಿಂಗಳಲ್ಲಿ ಹೆಚ್ಚು ಗೋಧಿ ಮತ್ತು ಸೀಮೆಎಣ್ಣೆ ಸರಬರಾಜು ಮಾಡಲು ಕೇಂದ್ರ ಸರಕಾರ ಒಪ್ಪಿದೆ.

●

ವಕೀಲರ ವಿರೋಧ

ಮಂಗಳೂರು— ಕರ್ನಾಟಕ ಮಂತ್ರಿಗಳ ಮತ್ತು ಶಾಸಕರ ಸಂಬಳ ಮತ್ತು ಸಂಭಾವನೆ ಹೆಚ್ಚಿಸುವ ಯೋಜನೆಯನ್ನು ಸ್ಥಳೀಯ ವಕೀಲ ಸಂಘ ವಿರೋಧಿಸಿದೆ; ಮತ್ತು ಮಂತ್ರಿಗಳ ಸಂಖ್ಯೆಯನ್ನು 12 ಕ್ಕೆ ಇಳಿಸಲು ಕೇಳಿಕೆ ಹಾಕಲಾಗಿದೆ.

★

ವಯಸ್ಕರ ಶಿಕ್ಷಣ ಕೇಂದ್ರಕ್ಕೆ

ಮೈಸೂರು– ವಯಸ್ಕರ ಶಿಕ್ಷಣ ಸಮಿತಿ ವಿದ್ಯಾಪೀಠಗಳ ಪದವೀದಾನ ಸಮಾರಂಭದಲ್ಲಿ, ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಮಾತನಾಡುತ್ತಾ – ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಎಲ್ಲ ರೀತಿಯ ಸಹಾಯದ ಭರವಸೆ ಇತ್ತರು.

★ ಲಕ್ನೋ– ವಿಧಾನ ಸಭೆಯಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಹಸ್ತಪತ್ರಿಕೆಗಳನ್ನು ಮತ್ತ ಚಪ್ಪಲಿ ಎಸೆದ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಲ್ಪಟ್ಟರು.

ವಿಶ್ವಸಂಸ್ಥೆ — ವಿಶ್ವದ ಸರ್ಕಾರ ಕಾರ್ಯಕ್ರಮಗಳಿಗೆ ಸಾಧಿ ಅಂಬಿಯಾ 420 ಮಿಲಿಯ ರೂ ಕೊಡಲು ಪ್ರತಿಜ್ಞೆ ಮಾಡಿದೆ

ಕೊಡಗಿನವರ ನಿರ್ಧಾರ

ಬೆಂಗಳೂರು— ಕೊಡಗಿನ ಕಂಬಡಕಡಪ್ರಾಜೆಕ್ಟನ್ನು ನೆರವೇರಿಸಲು ಸರಕಾರ ನಿರ್ಧರಿಸದಿದರೆ, ಕೊಡಗು ಜನತೆ ಪ್ರತ್ಯೇಕ ಕೊಡಗು ರಾಜ್ಯಕ್ಕಾಗಿ ಚಳುವಳಿ ಹೂಡ ಬೇಕಾಗುವುದೆಂದು ಕೊಡಗು ರಕ್ಷಣಾ ಸಮಿತಿ ಸರಕಾರ್ಯ ಎಚ್ಚರಿಕೆ ನೀಡಿದೆ.

ಪುಸ್ತಕಗಳ ರಾಶಿ ಬಿದ್ದಿದ್ದರೂ, ಹೊಸ ಪ್ರಕಟನೆ ಪ್ರತಿಬಂಧಿಸುವದಿಲ್ಲ

ನವದೆಹಲಿ— ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ಈಗ ಪ್ಪತ್ತಾಂಟವಾಗಿವೆ ರೂ. ೨ ಕೋಟಿಗೂ ಹೆಚ್ಚಿನ ಬೆಲೆಯ ಪುಸ್ತಕಗಳು ಮಾರಾಟವಾಗದೆ ಬಿದ್ದಿದ್ದರೂ, ಹೊಸ ಪ್ರಕಾಶನಗಳನ್ನು ಪ್ರತಿಬಂಧಿಸುವುದಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯ್ತು.

ಸಾಂಕೇತಿಕ ಮುಷ್ಕರ

ಅಹಮದಾಬಾದು— ಬಹುಕಾಲದಿಂದ ನೆರವೇರದಿರುವ ತಮ್ಮ ಕೇಳಿಕೆಗಳನ್ನು ಒತ್ತಾಯಮಾಡಲು ಗುಜರಾತಿನ 3 ಲಕ್ಷ ಸರ್ಕಾರಿ ನೌಕರರು ಏಪ್ರಿಲ್ 9 ರಂದು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಲು ನಿರ್ಧರಿಸಿರುವರು.

ಕರ್ನಾಟಕ ಜಾನಪದ ನೃತ್ಯಗಳಲ್ಲಿ ಪ್ರಧಾನಿಯವರ ಆಸ್ಥೆ

ಬೆಂಗಳೂರು— ದೆಹಲಿಯಲ್ಲಿ ಕರ್ನಾಟಕ ಸರಕಾರವು ನುತ್ತು ಭಾರತ ಪ್ರವಾಸಿ ಅಭಿವೃದ್ಧಿ ಕಾರ್ಪೊರೇಷನ್ ಸಂಯುಕ್ತ ಆಶ್ರಯದಲ್ಲಿ ತಾ|| 19 ರಂದು ಏರ್ಪಡಿಸ ಲಾಗಿದ್ದ ಸಾಂಸ್ಕೃತಿಕ ಕಾರ್ಯಗಳನ್ನು, ಕರ್ನಾಟಕದ ವಿವಿಧ ಜಾನಪದ ನೃತ್ಯಗಳಾದ " ಕರಡಿ ಮಜಲ್ " " ಬೀಸು ಕಂಸಾಳೆ "" ಕರಗ ' " ಸೋಮನ ಕುಣಿತ" ಕೀಲು ಕುದುರೆ ಮುಂತಾದವುಗಳನ್ನು ವೀಕ್ಷಿಸಿದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ವುಡ್‌ಲಾಂಡ್ 29 3 74 ರಿಂದ

ಅವೋಘ ಆರಂಭ

ರಿಕ್‌ಷಾವಾಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ದಿನ 3 ಪ್ರದರ್ಶನಗಳು

ಅಪೆರಾ 22 3 74 ರಿಂದ

ಜೀನಸ್

ಯೂನಿವರ್ಸಲ್ ಪಿಕ್ಚರ್ಸ್‌ರವರ ಈಸ್ಟ್‌ಮ್ಯಾನ್ ಕಲರ್ ತಮಿಳು ಚಿತ್ರ.

ಪಾತ್ರ — ಜೆಮಿನಿ ಗಣೇಶ್ ಸುಂದರಂಬಾಜ್ ನಿರ್ಮಲ ನಂಬಿಯಾರ್

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— Humanitarian Propoganda Monthly —

Edited Printed and Published by Dharmapracharanirata M S Krishna Rao (Proprietor) at the Satyavadi Press, Chamaraja puram Mysore